ಹುಳುಗಳ ಕಾಟ ರಾಜ್ಯಾದ್ಯಂತ ಪರಿಣಮಿಸಿದೆ. ಇದನ್ನು ತಪ್ಪಿಸಲು ಬೇರೊಂದು ಔಷಧಿ ಕೊಡುತ್ತೇವೆಂದು ಹೇಳುತ್ತಿಲ್ಲ, ಬದಲಾಗಿ ಈ ಹುಳುಗಳ ಕಾಟವನ್ನು ಹೋಗಲಾಡಿಸುವುದಕ್ಕೆ ಮತ್ತೊಂದು ಜಾತಿಯ ಕ್ರಿಮಿಗಳನ್ನು ಬಿಡುತ್ತಿದ್ದಾರೆ. ಆ ಕ್ರಿಮಿಗಳನ್ನು ತಯಾರಿಸುತ್ತಿದ್ದಾರೆ. ಇದರ ಬಗ್ಗೆ ಸರಿಯಾದ ವ್ಯವಸ್ಥೆಯಾಗಿಲ್ಲ. ಈ ಪರಿಸ್ಥಿತಿಯಲ್ಲಿ ತೆಂಗು ಬೆಳೆಯನ್ನು ಬೆಳಿಯಬೇಕೆ? ಅಥವಾ ಬಿಡಬೇಕೆ? ಎಂಬ ಪ್ರಶ್ನೆಗೆ ರೈತರು ಬಂದಿದ್ದಾರೆ. ಆದುದರಿಂದ, ಕಪ್ಪುತಲೆ ಹುಳುಗಳ ನಿವಾರಣೆಗಾಗಿ ಬೇರೊಂದು ಹುಳುಗಳನ್ನು ಬಿಡುವುದಾಗಲಿ ಅಥವಾ ಔಷಧಿಯನ್ನು ಇಂಜೆಕ್ಟ್ ಮಾಡುವುದನ್ನು ಬಿಟ್ಟು ಬೇರೆ ಯಾವುದಾದರೂ ವ್ಯವಸ್ಥೆಯಿದೆಯೇ? ಮತ್ತು ಬ್ಯಾಂಕ್ ಸಾಲ ತೀರಿಸುವುದಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ? ಎಂಬ ಬಗ್ಗೆ ತಾವು ಸ್ಪಷ್ಟಪಡಿಸಬೇಕು.

ಶ್ರೀ ಎ. ಕೃಷ್ಣಪ್ಪ : ತೆಂಗು ಬೆಳೆ ನಷ್ಟಕ್ಕೆ ಪರಿಹಾರ ಕೊಡುವಂಥ ಕಾರ್ಯಕ್ರಮ ಸರ್ಕಾರದಲ್ಲಿ ಸದ್ಯಕ್ಕಿಲ್ಲ. ಇಲ್ಲಿ ನೀತಿಯ ಪ್ರಶ್ನೆ ಉದ್ಭವವಾಗಿರುವುದರಿಂದ ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ, ಇದರ ಬಗ್ಗೆ ಸರ್ಕಾರದ ಮಟ್ಟದಲ್ಲಿ ಸಮಾಲೋಚಿಸಬೇಕಾಗಿದೆ. ಕಳೆದ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ತೆಂಗು ಬೆಳೆಗೆ ತಗುಲಿರುವ ರೋಗದ ಬಗ್ಗೆ ಅಧ್ಯಯನ ಮಾಡಲು ತಜ್ಞರಾದ ಡಾ: ರೆಡ್ಡಿಯವರ ನೇತೃತ್ವದಲ್ಲಿ ಒಂದು ತಂಡವನ್ನು ಕಳುಹಿಸಿಕೊಟ್ಟಿದ್ದೇವೆ. ಹಾಗಾಗಿ ಇವೊತ್ತು ನಮ್ಮ ರಾಜ್ಯದಲ್ಲಿರುವಂಥ ವಿಜ್ಞಾನಿಗಳು ಹೊರಗಡೆ ಇರುವಂಥ ವಿಜ್ಞಾನಿಗಳ ಸಹಾಯ ಪಡೆದು ನಮ್ಮ ಇಲಾಖಾ ವತಿಯಿಂದ ಈ ಬೆಳೆಗೆ ತಗುಲಿರುವಂಥ ರೋಗವನ್ನು ಸಂಪೂರ್ಣವಾಗಿ ನಿಯಂತ್ರಿಸುವುದಕ್ಕೆ ಸಾಧ್ಯವೇ? ಎಂಬುದರ ಬಗ್ಗೆ ತಜ್ಞರು ಆ ಕೆಲಸದಲ್ಲಿ ನಿರತರಾಗಿದ್ದಾರೆ. ನಿಮ್ಮ ತಾಲ್ಲೂಕಿಗೂ ಕೂಡ ವಿಜ್ಞಾನಿಗಳ ಒಂದು ಅಧ್ಯಯನ ತಂಡವನ್ನು ಕಳುಹಿಸಿಕೊಡುತ್ತಿದ್ದೇನೆ.

ರಸಗೊಬ್ಬರಕ್ಕೆ ಸಹಾಯ ಧನ

21 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) 1993-94 ನೇ ಸಾಲಿನಲ್ಲಿ ರಸಗೊಬ್ಬರ ಸಹಾಯ ಧನಕ್ಕಾಗಿ ನಿಗಧಿ ಪಡಿಸಿರುವ ಹಣ ಎಷ್ಟು?

ಆ) ನಿಗಧಿ ಪಡಿಸಿರುವ ಹಣದಲ್ಲಿ ಎಷ್ಟು ಹಣವನ್ನು ರೈತರು ಸಹಾಯ ಧನಕ್ಕಾಗಿ ಉಪಯೋಗಿಸಿ ಕೊಂಡಿರುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕೃಷಿ ಸಚಿವರು)

ಅ) ಎಲ್ಲಾ ರೈತರಿಗೆ ಅನ್ವಯವಾಗುವ ರಸಗೊಬ್ಬರದ ಬೆಲೆ ರಿಯಾಯತಿ ಯೋಜನೆಗೆ 93-94ನೇ ಸಾಲಿನಲ್ಲಿ ಮುಂಗಾರಿಗೆ 41.723 ಕೋಟಿ ರೂ.ಗಳು ಮತ್ತು ಹಿಂಗಾರು ಮತ್ತು ಬೇಸಿಗೆ ಹಂಗಾಮಿಗೆ 21.302 ಕೋಟಿ ರೂ.ಗಳು ಹೀಗೆ ಒಟ್ಟು 63.025 ಕೋಟಿ ರೂ.ಗಳನ್ನು ನಿಗಧಿ ಪಡಿಸಲಾಗಿದೆ. ಅಲ್ಲದೆ ಈ ಸಾಲಿನಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರೂಪಿಸಿರುವ ರಸಗೊಬ್ಬರ ಸಬ್ಸಿಡಿ ಯೋಜನೆಗೆ 27.50 ಕೋಟಿ ರೂ.ಗಳನ್ನು ನಿಗಧಿಪಡಿಸಲಾಗಿದೆ.

ಆ) ಎಲ್ಲಾ ರೈತರಿಗೂ ಅನ್ವಯವಾಗುವ ರಸಗೊಬ್ಬರ ಬೆಲೆ ರಿಯಾಯಿತಿ ಯೋಜನೆಯ ಮುಂಗಾರು ಹಂಗಾಮಿನಲ್ಲಿ 28.79 ಕೋಟಿ ರೂ.ಗಳು ಮತ್ತು ಹಿಂಗಾರು : ಬೇಸಿಗೆ ಹಂಗಾಮಿನಲ್ಲಿ ಅಕ್ಟೋಬರ್ನಿಂದ ಡಿಸೆಂಬರ್ನಿಂದ 1993ರ ಅಂತ್ಯದವರೆಗೆ 5.81ಕೋಟಿ ರೂ.ಗಳು ಹೀಗೆ ಒಟ್ಟು 34.60ಕೋಟಿ ರೂ.ಗಳು ಉಪಯೋಗವಾಗುರುತ್ತದೆ.

ಸಣ್ಣ ಮತ್ತು ಅತಿಸಣ್ಣ ರೈತರ ರಸಗೊಬ್ಬರ ಸಬ್ಸಿಡಿ ಯೋಜನೆಯಲ್ಲಿ ಡಿಸೆಂಬರ್ 1993 ರ ಅಂತ್ಯದವರೆಗೆ 11.62 ಕೋಟಿ ರೂ.ಗಳ ಉಪಯೋಗವಾಗಿರುತ್ತದೆ.

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ರೈತರಿಗೆ ರಸಗೊಬ್ಬರದಲ್ಲಿ ರಿಯಾಯಿತಿಗಾಗಿ 1993-94ನೇ ಸಾಲಿಗಾಗಿ ಸುಮಾರು ತೊಂಭತ್ತೂವರೆ ಕೋಟಿ ರೂಪಾಯಿಗಳಷ್ಟು ಹಣವನ್ನು ನಿಗದಿಪಡಿಸಲಾಗಿದೆ. ಆದರೆ, ಇದುವರೆವಿಗೂ ಸರ್ಕಾರ ಖರ್ಚು ಮಾಡಿರುವಂಥಾದ್ದು 46 ಕೋಟಿ ರೂಪಾಯಿಗಳು ಮಾತ್ರ. ಅಂದರೆ, ಶೇಕಡ 50 ಭಾಗದಷ್ಟು ಹಣವನ್ನು ಮಾತ್ರ ಉಪಯೋಗಿಸಿಕೊಳ್ಳಲಾಗಿದೆ. ಹಾಗಾದರೆ, ಕೇಂದ್ರ ಸರ್ಕಾರದ ವತಿಯಿಂದ ರೈತರಿಗೆ ರಸಗೊಬ್ಬರದ ಬೆಲೆ ರಿಯಾಯಿತಿಗಾಗಿ ಕೊಟ್ಟಂಥ ಹಣವನ್ನು ಖರ್ಚು ಮಾಡದಿರುವುದರಿಂದ ಈ ಸೌಲಭ್ಯದಿಂದ ಅವರು ವಂಚಿತರಾಗಿ ಅವರಿಗೆ ಅನ್ಯಾಯವಾಗಿಲ್ಲವೆ ಎಂಬ ಬಗ್ಗೆ ದಯಮಾಡಿ ಕೃಷಿ ಸಚಿವರು ತಿಳಿಸಬೇಕೆಂದು ಕೋರುತ್ತಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ಸರ್ಕಾರ ಆಲೋಚಿಸಿ ಮುಂದಿನ ಡಿಸೆಂಬರ್ ತಿಂಗಳ ಆಖೈರೊಳಗಾಗಿ ಎಷ್ಟು ಹಣವನ್ನು ಖರ್ಚು ಮಾಡಬಹುದು ಎಷ್ಟು ಮಂದಿ ರೈತರಿಗೆ ಇದರಿಂದ ಸಹಾಯವಾಗುತ್ತದೆ ಎನ್ನುವುದಕ್ಕೆ ವಾಯಿದೆ ಕೊಟ್ಟಿದ್ದೇವೆ. ಆದರೆ, ಅಲ್ಲಿಯವರೆಗೆ ನೋಡಿ ಅವಶ್ಯವಾದರೆ ಅದನ್ನೂ ಇನ್ನೂ ಹೆಚ್ಚು ದಿವಸ ಜಾರಿಯಲ್ಲಿರುವಂತೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಈಗ ಹಣ ಕೊಟ್ಟಿರಕತಕ್ಕಂಥಾದ್ದು 1993-94ನೇ ಸಾಲಿಗಾಗಿ ಮಾತ್ರ. ಈವರೆಗೆ ಖರ್ಚಾಗಿರತಕ್ಕಂಥಾದ್ದು ಕೇವಲ 50 ಭಾಗದಷ್ಟು ಮಾತ್ರ ಅಂದರೆ ಅರ್ಧದಷ್ಟು ಹಣವನ್ನು ಮಾತ್ರ ಉಪಯೋಗಿಸಿಕೊಳ್ಳಲಾಗಿದೆ. ಇನ್ನರ್ಧ ಹಣ ಉಪಯೋಗಿಸಿಕೊಂಡಿಲ್ಲ. ಈಗ 1993-94ನೇ ಸಾಲಿಗೆ ಅಂದರೆ ಮುಂದಿನ ಮಾರ್ಚಿ ತಿಂಗಳೊಳಗಾಗಿ ಉಳಿದ ಹಣವನ್ನು ಉಪಯೋಗಿಸಿಕೊಳ್ಳದೆ ಹೋದರೆ ರೈತರಿಗಾಗಿ ಕೊಟ್ಟಂಥ ಈ ಸೌಲಭ್ಯ ಕಡಿಮೆಯಾಗುವುದಿಲ್ಲವೇ? ಅವರು ಇದರಿಂದ ವಂಚಿತರಾಗುವುದಿಲ್ಲವೇ? ಇನ್ನು ಮೂರು ತಿಂಗಳಲ್ಲಿ ಹಣವನ್ನು ಸಂಪೂರ್ಣವಾಗಿ ಉಪಯೋಗಿಸಿ ಕೊಳ್ಳುವುದಕ್ಕಾಗುತ್ತದೆಯೆ? ಆದುದರಿಂದ, ಉಳಿದಿರುವ ಹಣವನ್ನು ಉಪಯೋಗಿಸಿಕೊಳ್ಳುವುದಕ್ಕೆ ಏನು ಕಾರ್ಯಕ್ರಮ ರೂಪಿಸಿದ್ದೀರಿ? ಈ ಹಣವನ್ನು 1994-95ನೇ ಸಾಲಿಗೆ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಸದಸ್ಯರು ನಾನು ಹೇಳಿದ್ದನ್ನು ಅರ್ಥ ಮಾಡಿಕೊಳ್ಳಬೇಕು. ಕೊಟ್ಟಿರತಕ್ಕ ಅವಧಿಯಲ್ಲಿ ಈ ಹಣವು ಖರ್ಚಾಗದಿದ್ದರೆ ಅದರ ವಾಯಿದೆಯನ್ನು ಹೆಚ್ಚು ಮಾಡುವುದಕ್ಕೆ ಸರ್ವ ಪ್ರಯತ್ನವನ್ನು ಮಾಡಿ, ಅವಧಿಯನ್ನು ಹೆಚ್ಚಿಸಲು ಸಾಧ್ಯವೆಂದು ನನಗೆ ವಿಶ್ವಾಸವಿದೆ.

ಶ್ರೀ ಎ.ಟಿ. ರಾಮಸ್ವಾಮಿ : ಅದನ್ನು ಹೇಗೆ ಮುಂದುವರಿಸಲು ಸಾಧ್ಯವಾಗುತ್ತದೆ? ಇದು 1993-94ನೇ ಸಾಲಿಗೆ ನಿಗದಿ ಮಾಡಿರತಕ್ಕದ್ದು. 1994-95ಕ್ಕೆ ಬೇರೆಯದನ್ನು ಕೊಡುತ್ತಾರೆ. ತಾವು 1993-94ನೇ ಸಾಲಿಗೆ ಕೊಟ್ಟಿರುವುದನ್ನು 1993-94ಕ್ಕೆ ಉಪಯೋಗ ಮಾಡಿಕೊಳ್ಳಬೇಡವೆ? ಈ ಡಿಸೆಂಬರ್‌ವರೆಗೆ ಅಂದರೆ 9 ತಿಂಗಳುಗಳ ಕಾಲ ಅದರಲ್ಲೂ ಮುಂಗಾರಿನಲ್ಲಿ ಕೇವಲ 50 ಭಾಗವನ್ನು ಉಪಯೋಗ ಮಾಡಿದ್ದಾರೆ. 91 ಕೋಟಿಯನ್ನು ಕೊಟ್ಟಿದ್ದರೆ ಕೇವಲ 50 ಬಾಗವನ್ನು ಉಪಯೋಗ ಮಾಡಿ ಕೊಂಡಿದ್ದಾರೆ. ಇನ್ನು ಮೂರು ತಿಂಗಳಲ್ಲಿ ಉಳಿದ ಹಣವನ್ನು ಹೇಗೆ ಉಪಯೋಗ ಮಾಡಿಕೊಳ್ಳಲು ಸಾಧ್ಯವಾಗುತ್ತದೆ? ಇದನ್ನು ಹೇಗೆ ಮುಂದುವರಿಸಲು ಬರುತ್ತದೆ? ಒಪ್ಪಿಕೊಳ್ಳಲು ಸಾಧ್ಯವಾಗುತ್ತದೆ? ಇದನ್ನು 1994-95ಕ್ಕೆ ಮುಂದುವರಿಸಲು ಸಾಧ್ಯವಿದೆಯೇ, ಅಧ್ಯಕ್ಷರೆ ಹೇಳಿ? ಅದರಲ್ಲೂ ಅದು ಬೇಸಿಗೆ ಕಾಲ, ಅದರಲ್ಲಿ ಅಷ್ಟು ಖರ್ಚಾಗುತ್ತದೆಯೆ? ಇದರಿಂದ ರೈತರಿಗೆ ತೊಂದರೆಯಾಗುವುದಿಲ್ಲವೆ? ರೈತರಿಗೆ ಅನ್ಯಾಯವಾಗುವುದಿಲ್ಲವೆ? ಆ ಸೌಲಭ್ಯವನ್ನು ನಾವು ರೈತರಿಗೆ ತಲುಪಿಸಲು ಸಾಧ್ಯವಾಗುತ್ತಿಲ್ಲ.

ಅಧ್ಯಕ್ಷರು : ಮಂತ್ರಿಗಳು ಅದನ್ನು ಮುಂದುವರಿಸುತ್ತೇನೆಂದು ಹೇಳುತ್ತಿದ್ದಾರಲ್ಲ.

ಶ್ರೀ ಎ.ಟಿ. ರಾಮಸ್ವಾಮಿ : ಅದನ್ನು ಮುಂದುವರಿಸಲು ಹೇಗೆ ಸಾಧ್ಯವಾಗುತ್ತದೆ? 1993-94ನೇ ಸಾಲಿಗೆ ಎಂದು ಅದನ್ನು ನಿಗದಿ ಮಾಡಿರುವುದು. ಆ ಹಣವನ್ನು 1994-95ಕ್ಕೆ ಮುಂದುವರಿಸಲು ಆಗುವುದಿಲ್ಲ. 1994-95ಕ್ಕೆ ಅವರು ಬೇರೆ ಹಣವನ್ನು ಕೊಡುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಎಷ್ಟೇ ವಾಯಿದೆಯನ್ನು ಗೊತ್ತು ಮಾಡಿದ್ದರು ಕೂಡ ಆಗಿಂದಾಗ್ಗೆ ಇಂಥ ಪ್ರಸಂಗಗಳು ಕೇಂದ್ರ ಸರ್ಕಾರದಲ್ಲಿ ಅನೇಕ ನಡೆದಿದೆ. ಇಂಥ ಸಂದರ್ಭ ಬಂದಾಗ ಹಣವು ಖರ್ಚಾಗದಿದ್ದರೆ ಅದಕ್ಕೆ ವಾಯಿದೆಯನ್ನು ಹೆಚ್ಚು ಮಾಡುವುದಾಗಲಿ, ಹೆಚ್ಚು ಹಣವನ್ನು ಒದಗಿಸಿಕೊಡುವುದಾಗಲಿ ಕೇಂದ್ರ ಸರ್ಕಾರದವರಿಗೆ ಸಾಕಷ್ಟು ಅಧಿಕಾರವಿದೆ. ಆ ವಿಷಯದಲ್ಲಿ ನನಗೆ ಸಾಕಷ್ಟು ನಂಬಿಕೆ ಇರುವುದರಿಂದ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ರಾಜ್ಯದಲ್ಲಿ ಆಹಾರ ಧಾನ್ಯ ಉತ್ಪಾದನೆ ಬಗ್ಗೆ

39-ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯ ಸರ್ಕಾರ ಆಹಾರ ಧಾನ್ಯ ಉತ್ಪಾದನೆಗೆ ನಿಗದಿ ಪಡಿಸಿದ ಗುರಿಯ ಪ್ರಮಾಣ ಎಷ್ಟು? (ಹಿಂಗಾರು ಮತ್ತು ಮುಂಗಾರು)

ಆ) ಆ ಗುರಿಯನ್ನು ಮುಟ್ಟಲಾಗಿದೆಯೇ?

ಇ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು);

ಅ) ಕಳೆದ ಸಾಲುಗಳಲ್ಲಿ ಆದ ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರದ ಯೋಜನಾ ಆಯೋಗದ ಶಿಫಾರಸ್ಸು ಮೇರೆಗೆ 92-93 ಹಾಗೂ 93-94ರ ಆಹಾರ ಧಾನ್ಯಗಳ ಉತ್ಪಾದನೆಯ ಗುರಿ ಈ ಕೆಳಕಂಡಂತೆ ನಿಗಧಿ ಪಡಿಸಲಾಗಿದೆ.

ಆಹಾರ ಧಾನ್ಯಗಳ ಉತ್ಪಾದನೆಯ ಗುರಿ (ಲಕ್ಷ ಟನ್ನುಗಳಲ್ಲಿ)

ಸಂ.	*ಹಂಗಾಮು*	*92-93*	*93-94*
1.	ಮುಂಗಾರು	62.10	62.35
2.	ಹಿಂಗಾರು	16.11	16.45
3.	ಬೇಸಿಗೆ	5.64	6.20
	ಒಟ್ಟು	**83.85**	**85.00**

ಆ) ಹೌದು. 92-93ನೇ ಸಾಲಿನಲ್ಲಿ ನಿಗಧಿಪಡಿಸಿದ ಗುರಿಯನ್ನು ಮುಟ್ಟಲಾಗಿದೆ. ಹಾಗೂ ವಿವರಗಳು ಈ ಕೆಳಗಿನಂತಿವೆ:ಸಾಧಿಸಿರುವ ಆಹಾರ ಉತ್ಪಾದನೆ (ಲಕ್ಷಟನ್ನುಗಳಲ್ಲಿ)

ಸಂ.	*ಹಂಗಾಮು*	*92-93*	*93-94*
1.	ಮುಂಗಾರು	62.61	57.50
2.	ಹಿಂಗಾರು	16.13	*
3.	ಬೇಸಿಗೆ	7.26	*
	ಒಟ್ಟು	86.00	*

* 93Ë94ನೇ ಹಿಂಗಾರು : ಬೇಸಿಗೆ ಡಂಗಾಮು ಇನ್ನು ಮುಗಿದಿರುವುದಿಲ್ಲ.

ಇ) ರಾಜ್ಯದ 93-94ನೇ ಸಾಲಿನ ಮುಂಗಾರು ಹಂಗಾಮಿನಲ್ಲೂ ಸಹ ಹವಾಮಾನ ಪೈಪರೀತ್ಯಗಳಿಂದಾಗಿ ಆಹಾರ ಉತ್ಪಾದನೆಯು 62.35 ಲಕ್ಷ ಟನ್‌ಗೆ ಬದಲಾಗಿ 57.50